ವಿ. ಹೇಮಂತಕುಮಾರ್, ಬೆಂಗಳೂರು
ದೇವರ ಪೂಜೆಗೆ ಪಾಕೆಟ್ ಹಾಲು ಉಪಯೋಗಿಸಬಹುದೆ?



ಖಂಡಿತ. ನೀರು ಹಾಕಿರುವುದರಿಂದ ಮಡಿಗೆ ಬರುತ್ತದೆ.

ಅಮರಯ್ಯಾ ಪತ್ರಿಮಠ, ಸುರಪುರ
ಸ್ವರ್ಗಕ್ಕೆ ಪ್ರಯಾಣದ ದರವೆಷ್ಟು ಮಹಾಸ್ವಾಮಿ?
ಒಂದು ಸಾರ್ಥಕ ಜೀವನದಷ್ಟು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಹಣಕ್ಕೆ ‘ಪ್ರಾಣವಾಯು’ ಸಮಾನಾರ್ಥಕ ಪದ ಆಗಬಹುದಲ್ಲವೆ?
‘ತ್ರಾಣವಾಯು’ ಹೆಚ್ಚು ಸೂಕ್ತ.

ಎಂ.ಎ. ಕುಮಾರ್, ಬೆಂಗಳೂರು
ಹುಟ್ಟು, ಸಾವು; ಯಾವುದು ಚೆನ್ನ ರಾಮ್?
ವಿಧಿವತ್ತಾಗಿ, ಅನಾಯಾಸವಾಗಿ ಯಾವುದು ಬಂದರೂ ಚೆನ್ನವೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯ ಹೆಚ್ಚಾಗಿ ಪ್ರೀತಿಸುವ ವಸ್ತು ಯಾವುದು ಸಾರ್?



ತನ್ನ ಪ್ರತಿಬಿಂಬ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಬಟ್ಟೆ ಬಿಚ್ಚಿದಷ್ಟು ಸುಲಭವಾಗಿ ಯಾರೂ ಮನಸ್ಸು ಬಿಚ್ಚಲ್ಲ. ಏಕೆ?
ದೇಹ ಬೆತ್ತಲಾದರೆ ಮತ್ತೆ ಮುಚ್ಚಬಹುದು; ಮನಸ್ಸು ಒಮ್ಮೆ ಬಿಚ್ಚಿದರೆ ಮುಚ್ಚಲಾಗದಲ್ಲ!

ವೈದೇಹಿ ಎನ್, ಮೈಸೂರು
ಹಳೆಯ ಜೀವನಶೈಲಿ ನಮ್ಮ ಜೀವನದಲ್ಲಿ ಮರುಕಳಿಸಬಹುದೆ ರಾಮ್?
ಖಂಡಿತ. ಮತ್ತೆ ಲಾಕ್‌ಡೌನ್ ಆದರೆ ಕರೆಂಟೂ ಇಲ್ಲದೆ ರುಬ್ಬುಗುಂಡು ಮರಳಿ ಬರುವುದಂತೆ.

ಎಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ
ಯಾವಾಗ ನೋಡಿದರೂ ಅತ್ತೆ ಸೊಸೆ ಜಗಳ ಎನ್ನುತ್ತಾರಲ್ಲ, ಮಾವ ತುಂಬಾ ಒಳ್ಳೆಯವನೆ?
‘ನೀವ್ಯಾರಿ ಇದ್ದಿದ್ರೆ ಹೀಗ್ಯಾಕಿರ್ತಿತ್ತು’ ಎಂದು ಉಗಿಸಿಕೊಳ್ಳುವ ಎರಡೂ ಪಾರ್ಟಿಗಳ ಪಂಚ್ ಬ್ಯಾಗ್ ಅವನು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಧರ್ಮ ಸಂಕಟ ಎಂದರೇನು?
ಒಂದು ಜಯಂತಿಗೆ ರಜೆ ಕೊಟ್ಟು ಇನ್ನೊಂದಕ್ಕೆ ಕೊಡದಿದ್ದರೆ ಭುಗಿಲೇಳುವ ಸಾಮಾಜಿಕ ರೋದನ.

ವಿದ್ಯಾ ಎನ್. ಪೈ, ಕಾಸರಕೋಡ
ಬದುಕು ಹೊರೆಯಾಗದೆ ಹಗುರವಾಗುವುದು ಯಾವಾಗ?
ಚಿಂತೆಯ ಗರ್ಭದ ಹೆರಿಗೆ ಆದಾಗ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಪತಿಯೇ ಪ್ರತ್ಯಕ್ಷ ದೈವ ಎನ್ನುತ್ತಾರೆ. ಹಾಗಾದರೆ ಸತಿ?
ಆ ದೈವದ ತಲೆಯೇರಿ ಕೂರುವ ಗಂಗೆ.

ವಿ. ಹೇಮಂತಕುಮಾರ್, ಬೆಂಗಳೂರು
ಯಾವಾಗಲೂ ಹರಿಯುತ್ತಲೇ ಇರುವ ನದಿಗೆ ಸುಸ್ತಾಗುವುದಿಲ್ಲವೆ?
ಊಹೂಂ. ಬಾಯಾರಿಕೆ ಆಗದಂತೆ ನೀರು ಕುಡಿಯುತ್ತಲೇ ಇರುತ್ತದಲ್ಲ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಬಾಳಿನ ಕತ್ತಲೆ ಕಳೆಯುವ ‘ಬೆಳಕು’ ಯಾವುದು?
ಅನುಭವ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ನಿಜವಾದ ಅರ್ಹತೆ ತಿಳಿಯುವುದು ಯಾವಾಗ ರಾಮ್?
ಅರ್ಹತೆ ನಿರ್ವಿವಾದವಾದಾಗ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಸಪ್ತಪದಿ ತುಳಿಯುವಾಗ ಗಂಡು ಬೇಗನೆ, ಹೆಣ್ಣು ಮೆಲ್ಲಗೆ ಹೆಜ್ಜೆ ಹಾಕುವ ಕಾರಣವೇನು?
ಹೊಂಚಿಕೊಳ್ಳುವ, ಹೊಂಚು ಹಾಕುವ ಹೆಜ್ಜೆಗಳು ಮೊದಮೊದಲು ಮೆಲ್ಲಗೆ ಇರಬೇಕು.

## ಬಹುಮಾನಿತ ಪ್ರಶ್ನೆ

ಬಿ.ಎನ್. ನರಸಿಂಹಮೂರ್ತಿ, ಚೆನ್ನೈ
ಚಲನಚಿತ್ರ ಮತ್ತು ಕೈದಿಗಳು– ಈ ಎರಡಕ್ಕೂ ಬಿಡುಗಡೆ ಎಂಬ ಪದ ಬಳಸುತ್ತೇವೆ. ಎರಡಕ್ಕೂ ಏನು ಸಂಬಂಧ?
ಎರಡೂ ಕಡೆ ರೀಲ್ ಬಿಡುವುದು, ಸೆರೆ (ಕ್ಯಾಮರಾ/ಕೋಳ) ಇರುತ್ತವಲ್ಲ.

ಹರಿತಸ, ಬೆಂಗಳೂರು
ಧಾರಾಕಾರ ಮಳೆಗೂ, ವಾಹಿನಿಗಳ ಧಾರಾವಾಹಿಗೂ ವ್ಯತ್ಯಾಸವೇನು?
ಮಳೆ ಸುರಿಸುವುದು ಸ್ವಚ್ಛ ನೀರು; ಧಾರಾವಾಹಿ ಸುರಿಸುವುದು ಉಪ್ಪುನೀರು.

ಹಾಡ್ಯ ಬ. ಜಯಾನಂದ, ಮೈಸೂರು
ಸಾಹಿತಿ, ನಟ, ರಾಜಕಾರಣಿಗಳಲ್ಲಿ ಯಾರು ಸಮಾಜಕ್ಕೆ ಹೆಚ್ಚು ಉಪಯುಕ್ತರು?
ನಿರಂತರ ಸುದ್ದಿ, ವೃದ್ಧಿ, ರದ್ದಿ ನೀಡುವುದರ ಮೂಲಕ ಜನರನ್ನು ರಂಜಿಸುವ ರಾಜಕಾರಣಿಯೇ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ
ನಾನು ಎಮ್ಮೆಲ್ಲೆ ಎಲೆಕ್ಷನ್, ಎಂಪಿ ಎಲೆಕ್ಷನ್ ಎರಡಕ್ಕೂ ನಿಂತ್ಕೋಬೇಕೂಂತಿದೀನಿ. ನಿಮ್ಮ ಅಭಿಪ್ರಾಯ?



ಅದು ಅಲ್ಲಿಗೇ ನಿಲ್ಲದು. ರಾಜಕಾರಣ ಚಟಕ್ಕೇರಿದರೂ ಬಿಡದೆ ವಂಶದಲ್ಲಿ ಹರಿಯುವ ಚಟ.

ಅನಸೂಯ ಟಿ. ಕೇದಿಗೆಮನೆ
ರೇಷ್ಮೆ ಹುಳುವನ್ನು ಸಾಯಿಸಿ ವಸ್ತ್ರ ತಯಾರಿಸಿ ಅದು ಭಗವಂತನಿಗೆ ಶ್ರೇಷ್ಠ ಎನ್ನುತ್ತಾರೆ. ಇದು ನ್ಯಾಯವೆ?
ಭಗವಂತನದೇ ತಪ್ಪು; ಜೇಡಕ್ಕಿತ್ತ ಜೊಲ್ಲನ್ನೇ ರೇಷ್ಮೆಹುಳಕ್ಕೂ ಇತ್ತಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಹುಲಿಯ ಚರ್ಮದ ಮೇಲೆ ಕುಳಿತವ ಸನ್ಯಾಸಿ. ಹುಲಿಯ ಜೊತೆ ಮಲಗಿದವ?
ದೈನಾಸಿ.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್